ಕರ್ನಾಟಕ ಸರಕಾರ, ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಚೇರಿ,
ಐವಾನ್-ಎ-ಶಾಹಿ ಬಡಾವಣೆ, ಗುಲ್ಬರ್ಗಾ

ಸಂಖ್ಯೆ ಸಿ1(1) ಆಡಳಿತ ಸಿಬ್ಬಂದಿ ಪಸ ಬಡ್ತಿ/33/2013–14

ದಿನಾಂಕ 23.09.2013

ಜ್ಞಾಪನ

ವಿಷಯ: ಗುಲ್ಬರ್ಗಾ ವಿಭಾಗ ವ್ಯಾಪ್ತಿಯ ಸಾರ್ವಜನಿಕ ಶಿಕ್ಷಣ ಇಲಾಖೆಯ ಪತ್ರಾಂಕಿತ ವ್ಯವಸ್ಥಾಪಕರಿಗೆ ಪತ್ರಾಂಕಿತ ಸಹಾಯಕರ ಹುದ್ದೆಗಳಿಗೆ ಸ್ಥಾನಪನ್ನ ಬಡ್ತಿ ನೀಡಿ ಸ್ಥಳ ನಿಯುಕ್ತಿಗೊಳಿಸುವ ಬಗ್ಗೆ

ಉಲ್ಲೇಖ: 1)ಸರ್ಕಾರದ ಆದೇಶ ಸಂಖ್ಯೆ ಇಡಿ 250 ಡಿಪಿಐ 2006 ದಿನಾಂಕ 22.02.2008
2)ಸರ್ಕಾರದ ಆದೇಶ ಸಂಖ್ಯೆ ಇಡಿ 464 ಡಿಪಿಐ 2008 ದಿನಾಂಕ 06.01.2009
3)ಈ ಕಛೇರಿಯ ಅಧಿಸೂಚನೆ ಸಂಖ್ಯೆ ಸಿ1(1) ಆಡಳಿತ ಪವ್ಯ ಜೇಪ/80/09–10 ದಿನಾಂಕ 08.05.2011.

==

ಉಲ್ಲೇಖ(3)ರ ಅಧಿಸೂಚನೆಯಲ್ಲಿ ಗುಲ್ಬರ್ಗಾ ವಿಭಾಗ ವ್ಯಾಪ್ತಿಯ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪತ್ರಾಂಕಿತ ವ್ಯವಸ್ಥಾಪಕರ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗಿದೆ. ಉಲ್ಲೇಖ (1) ಮತ್ತು (2)ರಲ್ಲಿ ಪ್ರತ್ಯಾಯೋಜಿಸಿದ ಅಧಿಕಾರದಂತೆ, ಪ್ರಸ್ತುತ ವಿಭಾಗದಲ್ಲಿ ಖಾಲಿ ಇರುವ ಪತ್ರಾಂಕಿತ ಸಹಾಯಕರ ಹುದ್ದೆಗಳಿಗೆ ಸ್ಥಾನಪನ್ನ ಬಡ್ತಿ ನೀಡಲು ನಿರ್ಧರಿಸಿ, ಪ್ರಚಲಿತ ಸರಕಾರದ ನಿಯಮಗಳ ಪ್ರಕಾರ ಜೇಷ್ಠತೆ ಹಾಗೂ ಮಿಸಲಾತಿಯಂತೆ ಅರ್ಹತೆ ಹೊಂದಿದ ಅನುಬಂಧದಲ್ಲಿ ತೋರಿಸಿದ ಪತ್ರಾಂಕಿತ ವ್ಯವಸ್ಥಾಪಕರನ್ನು ರೂ. 22800–43200 ವೇತನ ಶ್ರೇಣಿಯಲ್ಲಿ ಪತ್ರಾಂಕಿತ ಸಹಾಯಕರ ಹುದ್ದೆಗಳಿಗೆ ಸ್ಥಾನಪನ್ನ ಬಡ್ತಿ ನೀಡಿ, ಈ ಕೆಳಗಿನ ಷರತ್ತುಗಳಿಗೊಳಪಟ್ಟು, ಸ್ಥಳ ನಿಯುಕ್ತಿಗೊಳಿಸಿ ಆದೇಶಿಸಿದೆ.

ಷರತ್ತುಗಳು:

1. ಈ ಆದೇಶ ತಲುಪಿದ 15 ದಿನಗಳ ಒಳಗಾಗಿ ಬಡ್ತಿ ನೀಡಿ ಸ್ಥಳ ನಿಯುಕ್ತಿಗೊಳಿಸಿರುವ ಸ್ಥಳದಲ್ಲಿ ಕರ್ತವ್ಯಕ್ಕೆ ಹಾಜರಾಗುವುದು ತಪ್ಪಿದ್ದಲ್ಲಿ ನಿಯಮಾನುಸಾರ ಬಡ್ತಿಯನ್ನು ರದ್ದುಪಡಿಸಲಾಗುವುದು.
2. ಅನುಬಂಧದಲ್ಲಿರುವ ನೌಕರರು ಪತ್ರಾಂಕಿತ ಸಹಾಯಕರ ಹುದ್ದೆಯಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡ ದಿನಾಂಕದಿಂದ ಕರ್ನಾಟಕ ನಾಗರೀಕ ಸೇವಾ ನಿಯಮ 42(ಬಿ) ರನ್ವಯ ವೇತನ ನಿಗದಿಗೆ ಅರ್ಹರಿರುತ್ತಾರೆ.
3. ನಿಗದಿಪಡಿಸಿರುವ ಎಲ್ಲಾ ಇಲಾಖಾ ಪರೀಕ್ಷೆಗಳನ್ನು ತೇರ್ಗಡೆ ಹೊಂದಿರುವ ಬಗ್ಗೆ ಕಛೇರಿ ಮುಖ್ಯಸ್ಥರು ಸೂಕ್ತ ದಾಖಲೆಗಳನ್ನು ಪರಿಶೀಲಿಸಿ ಖಚಿತಪಡಿಸಿಕೊಳ್ಳುವುದು.

4. ಈ ಅಧಿಕಾರಿಗಳ ಮೇಲೆ ಶಿಸ್ತು ಪ್ರಕರಣ, ಇಲಾಖಾ ವಿಚಾರಣೆ, ನ್ಯಾಯಾಂಗ ಪ್ರಕರಣ ಬಾಕಿ ಇರುವಂತಿಲ್ಲ. ಸದರಿ ಹುದ್ದೆಯಿಂದ ಬಿಡುಗಡೆ ಮಾಡುವ ಮುನ್ನ ಇದನ್ನು ಖಚಿತಪಡಿಸಿಕೊಳ್ಳುವುದು.
5. ಮೇಲಿನ ಎಲ್ಲಾ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸಿರತಕ್ಕದ್ದು, ಈ ಷರತ್ತುಗಳು ಪೂರೈಕೆ ಆಗದಿದ್ದಂತಹ ಅಧಿಕಾರಿಗಳನ್ನು ಸ್ಥಾನಪನ್ನ ಬಡ್ತಿಗೆ ಪರಿಗಣಿಸಬಾರದೆಂದು ಸ್ಪಷ್ಟಪಡಿಸಿದೆ.
6. ಪತ್ರಾಂಕಿತ ಸಹಾಯಕರ ಹುದ್ದೆಗೆ ಬಡ್ತಿ ನೀಡುವಾಗ ತಪ್ಪಾಗಿ ಮಾಹಿತಿಯನ್ನು ನೀಡಿದ್ದಲ್ಲಿ ಯಾವುದೇ ಮುನ್ಸೂಚನೆ ಇಲ್ಲದೇ ಬಡ್ತಿಯನ್ನು ಹಿಂಪಡೆಯಲಾಗುವುದು.

(ಸೈಯದ್ ಅಬ್ದುಲ್ ರಬ್)
ಅಪರ ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

ಪ್ರತಿಗಳನ್ನು

1. ಮಹಾಲೇಖಪಾಲರು, ಕರ್ನಾಟಕ ರಾಜ್ಯ ಬೆಂಗಳೂರು–1
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ) ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ ಬೆಂಗಳೂರು.
3. ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು / ಧಾರವಾಡ.
4. ವಿಭಾಗದ ಎಲ್ಲಾ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ
5. ವಿಭಾಗದ ಎಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆಯ ಜಿಲ್ಲಾ ಉಪ ನಿರ್ದೇಶಕರುಗಳಿಗೆ
6. ವಿಭಾಗದ ಎಲ್ಲಾ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಪ್ರಾಂಶುಪಾಲರಿಗೆ
7. ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ
8. ಸಂಬಂಧಿಸಿದ ಸಂಸ್ಥೆ / ಕಛೇರಿ ಮುಖ್ಯಸ್ಥರಿಗೆ
9. ಸಂಬಂಧಿಸಿದ ನೌಕರರಿಗೆ.
10. ಕಛೇರಿಯ ಆಯುಕ್ತರ / ನಿರ್ದೇಶಕರು / ಸಹ ನಿರ್ದೇಶಕರು (ಆಡಳಿತ) ಮತ್ತು (ಪರೀಕ್ಷೆ) ರವರ ಆಪ್ತ ಶಾಖೆಗಳಿಗೆ
11. ಕಛೇರಿ ಪ್ರತಿ.

ಕರ್ನಾಟಕ ಸರಕಾರ, ಸಾರ್ವಜನಿಕ ಶಿಕ್ಷಣ ಇಲಾಖೆಯ, ಆಯುಕ್ತರ ಕಛೇರಿ,
ಐವಾನ್-ಎ-ಶಾಹಿ ಬಡಾವಣೆ, ಗುಲ್ಬರ್ಗಾ

ಸಂಖ್ಯೆ ಸಿ1(1) ಆಡಳಿತ ಸಿಬ್ಬಂದಿ ಪಸ ಬಡ್ತಿ/33/2013-14 ದಿನಾಂಕ 23.09.2013

ಅನುಬಂಧ

ಗುಲ್ಬರ್ಗಾ ವಿಭಾಗದ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪತ್ರಾಂಕಿತ ವ್ಯವಸ್ಥಾಪಕರಿಗೆ, ಪತ್ರಾಂಕಿತ ಸಹಾಯಕರ ಹುದ್ದೆಗೆ ಸ್ಥಾನಪನ್ನ ಬಡ್ತಿ ನೀಡಿ ಸ್ಥಳನಿಯುಕ್ತಿಗೊಳಿಸಿದ ಪಟ್ಟಿ

| ಕ್ರ. ಸಂ | ಅಧಿಕಾರಿಯ ಹೆಸರು, ಮತ್ತು ಕಾರ್ಯನಿರ್ವಹಿಸುತ್ತಿರುವ ಕಛೇರಿ ವಿಳಾಸ | ಪತ್ರಾಂಕಿತ ಸಹಾಯಕರ ಹುದ್ದೆಗೆ ಸ್ಥಾನಪನ್ನ ಬಡ್ತಿ ನೀಡಿ ಸ್ಥಳ ನಿಯುಕ್ತಿಗೊಳಿಸಿರುವ ಕಛೇರಿ ವಿಳಾಸ |
|---|---|---|
| 01 | ಶ್ರೀಮತಿ ಎಸ್.ಮೇರಿ ಜೋಸ್ಫೀನ್,<br>ಪತ್ರಾಂಕಿತ ವ್ಯವಸ್ಥಾಪಕರು<br>ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿ, ಹೂವಿನಹಡಗಲಿ<br>ಜಿಲ್ಲೆ ಬಳ್ಳಾರಿ | ಪತ್ರಾಂಕಿತ ಸಹಾಯಕರು,<br>ಉಪ ನಿರ್ದೇಶಕರ ಕಚೇರಿ,<br>ಸಾರ್ವಜನಿಕ ಶಿಕ್ಷಣ ಇಲಾಖೆ,<br>ಗುಲ್ಬರ್ಗಾ ಜಿಲ್ಲೆ ಗುಲ್ಬರ್ಗಾ |
| 02 | ಶ್ರೀ ಜಿ .ಗೋಣಿಬಸಪ್ಪ<br>ಪತ್ರಾಂಕಿತ ವ್ಯವಸ್ಥಾಪಕರು,<br>ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿ, ಕೂಡ್ಲಿಗಿ<br>ಜಿಲ್ಲೆ ಬಳ್ಳಾರಿ | ಪತ್ರಾಂಕಿತ ಸಹಾಯಕರು,<br>ಉಪ ನಿರ್ದೇಶಕರ ಕಚೇರಿ,<br>ಸಾರ್ವಜನಿಕ ಶಿಕ್ಷಣ ಇಲಾಖೆ,<br>ಬಳ್ಳಾರಿ ಜಿಲ್ಲೆ ಬಳ್ಳಾರಿ |

( ಸೈಯದ್ ಅಬ್ದುಲ್ ರಬ್ )
ಅಪರ ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ